ನೀರಿನ ಪೂರೈಕೆಗಾಗಿ ಸಬ್-ಮಿಷನ್ ಕಾರ್ಯಕ್ರಮದಡಿ ಯೋಜನೆಗಳನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

3. ಮಂಡ್ಯ ಜಿಲ್ಲೆಯ ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ಒಟ್ಟು 217 ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ರೂ.80.96 ಕೋಟಿ ಮೊತ್ತದ 7 ಕಾಲ್ಪನಿಕ ವಿನ್ಯಾಸ ವರದಿಗಳನ್ನು ತಯಾರಿಸಲಾಗಿದೆ.

ರಾಜ್ಯದಲ್ಲಿ ವೃತ್ತಿಪರ ಶಿಕ್ಷಣ

435 (906) ಶ್ರೀ ಆತ್ಮಾನಂದ. ಎಂ.ಎಸ್. (ಮಂಡ್ಯ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ವೃತ್ತಿಪರ ಶಿಕ್ಷಣವನ್ನು ರಾಜ್ಯದಲ್ಲಿ ನೀಡಲಾಗುತ್ತಿದೆಯೇ?
2. ಈ ಶಿಕ್ಷಣವನ್ನು ಯಾವ ಹಂತದಲ್ಲಿ ನೀಡಲಾಗುತ್ತಿದೆ?
3. ಇದರ ವಿವರಗಳೇನು?

ಪ್ರೊ.ಬಿ.ಕೆ. ಚಂದ್ರಶೇಖರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

1. ಹೌದು
2. ಹಂತದಲ್ಲಿ
3. ವೃತ್ತಿ ಶಿಕ್ಷಣವನ್ನು ಆಯ್ದ ಪದವಿ ಪೂರ್ವ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ನಡೆಸಲಾಗುತ್ತಿದೆ. ಪದವಿ ಪೂರ್ವ ಕಾಲೇಜುಗಳಲ್ಲಿ 22 ಟ್ರೇಡುಗಳು, ಪಾಲಿಟೆಕ್ನಿಕ್‌ಗಳಲ್ಲಿ 07 ಟ್ರೇಡುಗಳು ನಡೆಯುತ್ತಿದೆ. (ಪಟ್ಟಿಯನ್ನು ಲಗತ್ತಿಸಿದೆ).

ಅನುಬಂಧ

I - ಕೃಷಿ ಆಧಾರಿತ

1. ಹೈನುಗಾರಿಕೆ
2. ತೋಟಗಾರಿಕೆ
3. ಕೋಳಿ ಸಾಗಾಣಿಕೆ
4. ರೇಷ್ಮೆ ಕೃಷಿ

II - ವ್ಯಾಪಾರ ಮತ್ತು ವಾಣಿಜ್ಯ ಆಧಾರಿತ

1. ಬ್ಯಾಂಕಿಂಗ್
2. ಗ್ರಂಥಾಲಯ ವಿಜ್ಞಾನ
3. ಮಾರ್ಕೆಟಿಂಗ್ ಮತ್ತು ಸೇಲ್ಸ್ ಮನ್‌ಷಿಪ್
4. ಮೆಟೀರಿಯಲ್ ಮ್ಯಾನೇಜ್‌ಮೆಂಟ್ ಟೆಕ್ನಾಲಜಿ

III - ತಂತ್ರಜ್ಞಾನ ಮತ್ತು ಇಂಜನೀಯರಿಂಗ್ ಆಧಾರಿತ

1. ಆಟೋಮೊಬೈಲ್ ಸರ್ವೀಸಿಂಗ್
2. ಕಟ್ಟಡ ಮತ್ತು ರಸ್ತೆ ನಿರ್ಮಾಣ ತಾಂತ್ರಿಕತೆ
3. ಹೊಲಿಗೆ ಮತ್ತು ಕಸೂತಿ
4. ಕಂಪ್ಯೂಟರ್ ಟೆಕ್ನಿಕ್
5. ಎಲೆಕ್ಟ್ರಿಕಲ್ ವೈರಿಂಗ್ ಅಂಡ್ ಸರ್ವೀಸಿಂಗ್ ಆಫ್ ಎಲೆಕ್ಟ್ರೀಕಲ್ ಅಪ್ಲೈಯನ್ಸಸ್
6. ಎಲೆಕ್ಟ್ರಾನಿಕ್ ಟೆಕ್ನಾಲಜಿ
7. ಪೇಂಟಿಂಗ್ ಮತ್ತು ಕಮರ್ಷಿಯಲ್ ಆರ್ಟ್
8. ಪ್ರಿಂಟಿಂಗ್ ಮತ್ತು ಬುಕ್ ಬೈಂಡಿಂಗ್
9. ಸರ್ವೇಯಿಂಗ್
10. ಟೆಕ್ಸ್‌ಟೈಲ್ ಟೆಕ್ನೀಷಿಯನ್
11. ಟಿ.ವಿ. ಮತ್ತು ರೇಡಿಯೋ ರಿಪೇರಿ
12. ಟೂ ವೀಲರ್ ಸರ್ವಿಸಿಂಗ್

IV - ಗೃಹ ವಿಜ್ಞಾನ

1. ಪ್ರೀಸ್ಕೂಲ್ ಎಜುಕೇಶನ್
2. ಹೆಲ್ತ್‌ಕೇರ್ ಮತ್ತು ಬ್ಯೂಟ ಕಲ್ಚರ್

V - ಪಾಲಿಟೆಕ್ನಿಕ್‌ನಲ್ಲಿ ನಡೆಯುತ್ತಿರುವ ವೃತ್ತಿ ಶಿಕ್ಷಣ ಕೋರ್ಸುಗಳು

1. ಆಟೋಮೊಬೈಲ್ ಸರ್ವೀಸಿಂಗ್
2. ಎಲೆಕ್ಟ್ರಿಕಲ್ ವೈರಿಂಗ್‌ಮೋಟಾರ್ ರಿವೈಂಡ್ ಮತ್ತು ಸರ್ವೀಸಿಂಗ್ ಆಫ್ ಎಲೆಕ್ಟ್ರಿಕಲ್ ಅಪ್ಲೈಯನ್ಸ್‌ಸ್
3. ಮೆಷಿನಿಸ್ಟ್
4. ಪರ್ಸನಲ್ ಕಂಪ್ಯೂಟರ್ ಸರ್ವೀಸಿಂಗ್
5. ರೆಫ್ರಿಜರೇಷನ್ ಮತ್ತು ಏರ್‌ಕಂಡಿಷನಿಂಗ್
6. ಸರ್ವೀಸಿಂಗ್ ಆಫ್ ಎಲೆಕ್ಟ್ರಾನಿಕ್ ಎಕ್ವಿಪ್‌ಮೆಂಟ್
7. ಟೆಕ್ಸ್‌ಟೈಲ್ ಟೆಕ್ನೀಷಿಯನ್

ಮಂಡ್ಯ ಜಿಲ್ಲೆಯಲ್ಲಿ ವಸತಿ ರಹಿತರಿಗೆ ವಸತಿ ಯೋಜನೆ

437 (956) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಡ್ಯ ಜಿಲ್ಲೆಯಲ್ಲಿ ವಸತಿ ರಹಿತರಿಗೆ ಗೃಹ ನಿರ್ಮಾಣ ಮಾಡಲು ವಿಶೇಷ ಕಾರ್ಯಕ್ರಮವನ್ನೇನಾದರೂ ರೂಪಿಸಲಾಗಿದೆಯೇ;

2. ರೂಪಿಸಿದ್ದಲ್ಲಿ, ಅದರ ವಿವರಗಳೇನು?